doc-607
T-8-2

Reg No B C 155 11 12 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕಾಂಗ್ರೆಸ್ ನಿರ್ಧಾರ ಜಾರಿಗೆ ತರುವಂತೆ ಕರೆ

ದೇವರ ಮಹಿಮೆ

ಸರ್ವಾಂತರ್ಯಾಮಿಯಾದ ಈಶ್ವರನು ಪೂರ್ವ ಸಂಸ್ಕಾರಗಳಿಗನುಸಾರವಾಗಿ ಪ್ರಾಣಿಗಳ ಮೇಲೆ ತೋರಿದ ಅಗಾಧ ದಯೆಯ ಘಟನೆ ಬಸವಕಲ್ಯಾಣದಲ್ಲಿ ಜರುಗಿದ್ದರ ಪ್ರತ್ಯಕ್ಷ ಪ್ರಮಾಣಗಳೊಂದಿಗೆ ಘಟನೆಯನ್ನು ಪ್ರತ್ಯಕ್ಷ ನೋಡಿದವರಮುಖಾಂತರ ನಾನು ಕಲ್ಯಾಣದ ಪ್ರವಾಸಕ್ಕೆ ಹೋದಾಗ ತಿಳಿದು ಸಂಶೋಧಿಸಿದ ವಾಸ್ತವಿಕ ದೈವೀ ಅಂಶವನ್ನು ಓದುಗರ ಚಿಂತನೆಗಾಗಿ ವಿವರಿಸುತ್ತಿದ್ದೇನೆ.

ಬಸವ ಕಲ್ಯಾಣದ ಶ್ರೀ ಸಂಗಪ್ಪ ಚಂದನ ಕೇರಿ ಎಂಬ ಪರಿಣಾಮಸ್ಥರ ಒಕ್ಕಲುತನ ಸಲಗರ (ತಾ. ಆಳ್ಳಾದ) ದಲ್ಲಿ ಕೂಡ ಇದ್ದು ಅಲ್ಲಿ ದೈವೀ ಪ್ರಕೋಪದಿಂದ ಉಂಟಾದ ನೀರು ಮತ್ತು ಕಣಿಕೆಯ ಅಭಾವದ ಕಾರಣ ದಿನಾಂಕ 18-10-72 ರಂದು ಸಲಗರದಲ್ಲಿಯ ಎತ್ತುಗಳನ್ನು ಕಲ್ಯಾಣಕ್ಕೆ ಬರಮಾಡಿಕೊಂಡರು : ಅವುಗಳನ್ನು ನೀರಿಗಾಗಿ ಕಲ್ಯಾಣದ ಹತ್ತಿರ ಇರುವ ತ್ರಿಪುರಾಂತಕೇಶ್ವರ ಕೆರೆಗೆ ಹೊಡೆದುಕೊಂಡು ಹೋಗಿ ಮರಳಿ ಮನೆಗೆ ಬರುವಾಗ ಒಂದು ದೊಡ್ಡ ಎತ್ತು ಸುಮಾರು ರೂ. 1000 ಬೆಲೆಯುಳ್ಳದ್ದು ಸರಿಯಾದ ಮೇವಿನ ಅಭಾವದ ಅಶಕ್ತತೆಯಿಂದ ನಡೆಯದಂತಾಯಿತು : ನಿಲ್ಲದೆ ಇತರ ಎತ್ತುಗಳು ಅದಕ್ಕೆ ಧಕ್ಕೆ ಕೊಟ್ಟದುದರಿಂದಲೋ ಏನೋ ಅದು ಬಸವೇಶ್ವರರ ಧ್ಯಾನದ "ಅರುವಿನ ಮನೆಯ" ಮುಂಭಾಗದ ರಸ್ತೆಯ ಮೇಲೆ ಬಿದ್ದು ಬಿಟ್ಟಿತು. ಮನೆಗೆ ತರಲು ಪ್ರಯತ್ನ ಪಟ್ಟರೂ ನಿಷ್ಫಲವಾಯಿತು ; ಅದುದರಿಂದ ಎತ್ತನ್ನು ಅಲ್ಲಿಯೇ ಬಿಟ್ಟು ಎರಡುದಿನಗಳತನಕ ಔಷಧೋಪಚಾರಮಾಡಿಸಿದರೂ ವಾಸಿಯಾಗುವ ಲಕ್ಷಣಗಳು ಕಾಣದ ಕಾರಣ ಎತ್ತು ಬದುಕುವದೆಂಬ ಆಸೆಯನ್ನು ತೊರೆದು ಶುಕ್ರವಾರ 20-10-72 ಸಾಯಂಕಾಲ ಎತ್ತನ್ನು ಕಟುಕರಿಗೆ ಮೂನತ್ತು ರೂಪಾಯಿಗಳಿಗೆ ಮಾರಲಾಯಿತು.

ಶ್ರೀ ಚಂದನಕೇರಿಯವರ ಮನೆತನದಲ್ಲಿ ಸತ್ತ ಎತ್ತುಗಳನ್ನು ಹೂಗಿಯುವ ಪದ್ಧತಿ ಮಾತ್ರ ಇತ್ತು ; ಇವರು ಕಟುಕರಿಗೆ ಮಾರಿದುದು ಇದು ಮೊದಲನೆಯ ಸಲವಾಗಿತ್ತು. ಹೀಗಾಗಿ ಬಸವನು ತನ್ನ ಮಹಿಮೆಯನ್ನು ಜಗಕ್ಕೆ ತೋರಿಸಬೇಕೆಂಬ ದೈವೀ ಇಚ್ಛೆ ಇದ್ದಂತೆ ಅನಿಸುವದು. ಎತ್ತನ್ನು ಕೊಂಡ ಕಟುಕರು ಮರುದಿವಸ 21-10-72 ಸಾಯಂಕಾಲ ಅರುವಿನ ಮನೆಯ ರಸ್ತೆಯ ಮೇಲೆಯೇ ಕೊಯಬೇಕೆಂದು ತೀರ್ಮಾನಿಸಿ ತಮ್ಮ ಸಲಕರಣೆಗಳೊಂದಿಗೆ ಬಂದರು ಅಷ್ಟರಲ್ಲಿ ಒಂದು ಸರ್ಪವು ಎತ್ತಿನ ಕೊರಳನ್ನು ಸುತ್ತಿಕೊಂಡು ಎರಡು ಕೋಡುಗಳ ಮಧ್ಯೆ ಹಣೆಯ ಮೇಲೆ ಹೆಡೆ ಎತ್ತಿ ಬುಸುಗುಟ್ಟುತ್ತಿತ್ತು. ಮೊಟ್ಟನೆಯದಲು ಕಟುಕರಿಗೆ ಸರ್ಪದ ಬುಸುಗುಟ್ಟುವ ಸಪ್ಪಳ ಕೇಳಿಬರುತ್ತಿದ್ದ್ಯಾಗ್ಯೂ ಅದು ಎತ್ತಿನ ಸಪ್ಪಳವೆಂದು ಭಾವಿಸಿ ಹತ್ತಿರ ಹೋದಾಗ ಸರ್ಪವಿದ್ದದ್ದನ್ನು ಕಂಡು ಹೆದರಿ ಹಿಂದಕ್ಕೆ ಸರಿದು ದೂರ ಬಂದು ನಿಂತರು. ಅರುವಿನ ಮನೆಯ ಪೂಜಾರಿಯು ಎತ್ತಿನ ಸಮೀಪಕ್ಕೆ ಬಂದರೂ ಸರ್ಪವು ಆತನಿಗೆ ಕೇಣಕಲಿಲ್ಲ. ಆದರೆ ಕಟುಕರು ಹತ್ತಿರಕ್ಕೆ ಬಂದಾಗ ಮಾತ್ರ ಸರ್ಪವು ಬಿಟ್ಟನಿಂದ ಹೆಡೆ ಜಾಡಿಸಿ ಬುಸುಗುಟ್ಟುತ್ತಿತ್ತು. ಹೀಗಾಗಿ ಕಟುಕರು ನಿರುಪಾಯರಾಗಿ, ಎತ್ತನ್ನು ಬಿಟ್ಟುಬಿಟ್ಟು ಪರಾರಿಯಾದರು ಸ್ವಲ್ಪ ಸಮಯ ನಂತರ ಸರ್ಪವು ಮಾಯವಾಯಿತು .... ಈಶ್ವರ ಕೃಪೆಯಿಂದ ಎತ್ತು ಗುಣಗೊಂಡಿತು.

ಶ್ರೀ ಆಯಲರೆಡ್ಡಿ ಪಾಟೀಲ ಸೇಡಂ [ವಿಶ್ವಕಲ್ಯಾಣ]

ಪಾರ್ಟಿ ನಿರ್ಧಾರ ಜಾರಿಗೆ ಬರಲು

ನವದೆಹಲಿ— ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿ ಬಗ್ಗೆ ದೀರ್ಘವಾಗಿ ಪರ್ಯಾಲೋಚಿಸಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕೇಂದ್ರ ಮತ್ತು ರಾಜ್ಯ ಸರಕಾರಗಳು, ಬೆಲೆ ಏರಿಕೆ ಮತ್ತಿತರ ಸಮಸ್ಯೆ ಬಗ್ಗೆ ಜನರ ನೈಜ ಕುಂದುಕೊರತೆಯನ್ನು ಹೋಗಲಾಡಿಸುವಂತೆ ಪಾರ್ಟಿಯ ಎಲ್ಲಾ ನಿರ್ಧಾರಗಳನ್ನೂ ಜಾರಿಗೆ ತರಬೇಕೆಂದು ನಿರ್ಧರಿಸಲಾಯಿತು.

★

ಮೆಡಲುಗಳ ಮೇಲೆ ಇಂದಿರಾರು

ರೋಂ— ವಿಶ್ವಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸಂಸ್ಥೆ ಹೊರಡಿಸಿರುವ ಕಂಚು ಮತ್ತು ಬೆಳ್ಳಿ ಮೆಡಲುಗಳ ಮೇಲೆ ಭಾರತ ಪ್ರಧಾನಿ ಇಂದಿರಾ ಭಾವಚಿತ್ರ ಮುದ್ರಿಸಲಾಗಿದೆ – ಮಾರಲ್ಪಡುವ ಇವು ಭಾರತದಲ್ಲಿ ಆಹಾರ ಮತ್ತು ವ್ಯವಸಾಯ ಸಂಸ್ಥೆ ಕಾರ್ಯದಲ್ಲಿ ಉಪಯೋಗಿಸಲಾಗುತ್ತವೆ.

●

ಮಳೆಹಾವಳಿ

ಮದರಾಸು— ಕಳೆದ 6 ದಿನಗಳಿಂದ ಭೀಕರವಾಗಿ ಸುರಿಯುತ್ತಿರುವ ಮಳೆಗಾಗಿ ತಿರುಚರಪಳ್ಳಿ ಕಡೆಗೆ ಹೋಗಬೇಕಾಗಿದ್ದ ಎಕ್ಸ್‌ಪ್ರೆಸ್ ಮತ್ತು ಮೇಲ್ ರೈಲುಗಳೂ ನಿನ್ನೆ ನಿಲ್ಲಿಸಲ್ಪಟ್ಟಿದ್ದವು — ತಂಜಾವೂರು ಜಿಲ್ಲೆಯಲ್ಲಿ ಸಾಂಬಾ ಭತ್ತದ 45000 ಎಕ್ರೆ ಭೂಮಿ ನೀರಿನಲ್ಲಿ ನಿಂತಿದೆ – ಸೇಲಂ ಜಿಲ್ಲೆಯಲ್ಲಿ 7 ಮಂದಿ ಸತ್ತರು – ಕಾವೇರಿ ತೀರದಲ್ಲಿ ವಾಸಿಸುತ್ತಿರುವವರಿಗೆ ಪ್ರವಾಹ ಬಗ್ಗೆ ಎಚ್ಚರಿಕೆ ನೀಡಲಾಗಿದೆ.

●

ದಿವ್ಯವಾಣಿ

ಇತರರ ತಪ್ಪುಗಳು ನಮ್ಮ ಕಣ್ಣು ಮುಂದಿವೆ, ನಮ್ಮವು ನಮ್ಮ ಹಿಂದಿವೆ.

— ಸೆನೇಕಾ

ಭತ್ತ ಶೇಖರಣೆ ಗುರಿ

ಬೆಂಗಳೂರು— ಸರ್ಕಾರ ಶೇಖರಿಸಬೇಕೆಂದಿರುವ 1.45 ಲಕ್ಷ ಟನ್ ಭತ್ತದ ಗುರಿ ಮುಟ್ಟಲು ಸರ್ಕಾರ ನಿರ್ಧರಿಸಿರುವುದಾಗಿ ಮುಖ್ಯಮಂತ್ರಿ ಶ್ರೀ ದೇವರಾಜಅರಸ್‌ರವರು ಹೇಳಿದರು.

★

ಮೈಸೂರು ಲಾಟರಿ

ಬೆಂಗಳೂರು— ನಿನ್ನೆ ತೆಗೆದ 44 ನೇ ಲಾಟರಿಯಲ್ಲಿ ಬಂಪರ್ ಬಹುಮಾನ ಅರಕಲಗೂಡಿನಲ್ಲಿ ಮಾರಲ್ಪಟ್ಟ ನಂ. ಜಿ ಕೆ 1434557 ನೇ ಟಿಕೇಟಿಗೆ ದೊರೆಯಿತು.

★

12 ಸಾವು

ಚಾಮರಾಜನಗರ— ಚಿಕ್ಕಹೊಳೆ ಅಣೆಕಟ್ಟು ಅನಾಹುತದಲ್ಲಿ 12 ಮಂದಿ ಸತ್ತಿರುವರು.

●

ಧರಣ ಸತ್ಯಾಗ್ರಹ

ಮೈಸೂರು ಜಿಲ್ಲಾ ಕಛೇರಿ ಮುಂದೆ ಸ್ಥಳೀಯ ಉಮೇದುವಾರರು ಸರ್ವಿಸ್ ಸರಿಪಡಿಸಬೇಕೆಂದು ಶನಿವಾರ ಧರಣ ಸತ್ಯಾಗ್ರಹ ಆಚರಿಸಿದರು – ಹೀಗೇ ಬುಬ್ಬಳ್ಳಿ, ಉಡುಪಿ, ತುಮಕೂರು, ನಂಜನಗೂಡು ಮತ್ತಿತರ ಸ್ಥಳಗಳಲ್ಲಿ ನಡೆಯಿತು.

★

ಅಕ್ರಮ ಸಾಗಾಣಿಕೆ

ಮಂಗಳೂರು— ಇಲ್ಲಿಗೆ 8 ಮೈಲಿ ದೂರದಲ್ಲಿ ಕಾಸರಗೋಡಿನಿಂದ ಬೆಂಗಳೂರಿಗೆ ಹೋಗುತ್ತಿದ್ದ ಲಾರಿಯನ್ನು ಪಾಡೆಲ್ ಹತ್ತಿರ ಕೇಂದ್ರ ಕಸ್ಟಂಸ್ ಅಧಿಕಾರಿಗಳು ಅಡ್ಡಕಟ್ಟಿ ಅದರಲ್ಲಿದ್ದ ರೂ 25 ಲಕ್ಷ ಬೆಲೆಯ ಸ್ವಿಸ್ ಗುರುತ್ತಿದ್ದ 800 ತೋಲಾ ಚಿನ್ನ ವಶಪಡಿಸಿಕೊಂಡು, ಲಾರಿಯನ್ನೂ ವಶಪಡಿಸಿಕೊಂಡು, ಡ್ರೈವರ್ ಮತ್ತು ಕ್ಲೀನರನ್ನು ಬಂಧಿಸಿದರು.

ಹೃದ್ರೋಗ

ನವದೆಹಲಿ— ಲೋಕಸಭೆಯಲ್ಲಿ ಹೃದ್ರೋಗ ಸಂಬಂಧದ ಪ್ರಶ್ನೆಗೆ ಉತ್ತರ ಕೊಡುತ್ತಾ, ಆರೋಗ್ಯ ಮಂತ್ರಿಗಳು, ಸದಸ್ಯರು ಪ್ರಾಣಾಯಾಮ ಮತ್ತಿತರ ಯೋಗಾಭ್ಯಾಸಗಳನ್ನು ಮಾಡಲು ಸಲಹೆಮಾಡಿದರು.

ಸ್ಪರ್ಶವೇದ್ಯ ಸಂಪತ್ತು

ಬೊಂಬಾಯಿ— ಈಗಿನ ಜೆಲೆಯಂತೆ ದೇಶದಲ್ಲಿ ಸ್ಪಷ್ಟ ಸಂಪತ್ತಿನ ಬೆಲೆ 60–61 ರಲ್ಲಿ ರೂ 679000 ವಿದ್ದದ್ದು 65–66 ರಲ್ಲಿ ರೂ. 104500 ಕ್ಕೆ ಹೆಚ್ಚಿದೆ.

ತಿರಸ್ಕಾರ

ತ್ರಿವೇಂದ್ರಂ— ಕೋಮುವಾರು ರೀತಿ ಕೆಲಸ ಕೊಡಲು ವಿಾಸಲಿಡುವಂತೆ ನೆಟ್ಟೂರು ದಾನೋದರ ಕಮಿಟಿಯ ಶಿಫಾರಸನ್ನು ಸರಕಾರ ತಿರಸ್ಕರಿಸಿದೆ ಎಂದು ಮುಖ್ಯ ಮಂತ್ರಿ ಶ್ರೀ ಅಚ್ಚುತ ಮೆನನ್ ಪತ್ರಿಕೆಯವರಿಗೆ ತಿಳಿಸಿದರು.

ಪುರಸಭೆ

ಮೈಸೂರು— ಪುರಸಭಾ ಉಪಾಧ್ಯಕ್ಷ ಶ್ರೀ ಅಪ್ಪಾಜಪ್ಪನವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಅಧಿವೇಶನದಲ್ಲಿ– ಶ್ರೀ ಬೆಳ್ಳಿಯಪ್ಪನರು, ಪೌರಸಭೆಯ ಚುನಾವಣೆಗೆ ಕೈವು ಕೈಗೊಳ್ಳದಿರುವದನ್ನು ಟೀಕಿಸಿದರು– ಸಕ್ಕರೆ ಪರ್ಮಿಟ್‌ಗಳನ್ನು ನ್ಯಾಯ ಬೆಲೆ ಅಂಗಡಿಗಳಿಗೆ ಕೊಡುತ್ತಿಲ್ಲದಿದ್ದು ಜನರಿಗೆ ತೊಂಬಾ ತೊಂದರೆಯಾಗಿದೆ ಎಂದೂ ಹೇಳಿದರು ; ಇತರರೂ ಈ ವಿಷಯಗಳ ಬಗ್ಗೆ ಮಾತನಾಡಿದರು.

SHAKTI
SUDHA

A Superb Tonic



Protect the Cow

ವುಡ್‌ಲಾಂಡ್ 8 12 72 ರಿಂದ ಅಮೋಘ ಪ್ರಾರಂಭ

ಇಂಗ್ಲೀಷ್ ಮತ್ತು ಕಲರ್ ಅತ್ಯಮೋಘ ಚಿತ್ರ

ಟ್ರೀ ಫಾಂಟಾಸ್ಟಿಕ್
ಸೂಪರ್ ಮೆನ್

ಪಾತ್ರ — ಬ್ರಾಡ್ ಹ್ಯಾರಿಸ್, ಟಾಂ ಕೆನ್ನಾಲ್, ನಿಕ್ ಜೋರ್ಡ್ಸ್

ದಿನ 3 ಪ್ರದರ್ಶನಗಳು

ಅಪೆರಾ 8 12 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗಾಂವ್ ಹಮಾರ
ಷೆಹರ್ ತುಮಾರ

ಪಾತ್ರ : ರಾಜೇಂದ್ರ ಕುಮಾರ್ ರೇಖ ಸುಜಿತ ಕುಮಾರ್ ಲಲಿತಪವಾರ್

ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Edited Printedand Publishedby Dharmapracharanirata M S Krishna Rao (Propretor) at the Satyavadi Press, Chamarajapuram Mysore

Help The Gorakshana

— Humanitarian Propoganda Monthly—

Contribute Liberally to the National Defence Fund